Reg. No. M. 1550.
"KODAGU" MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೪ | ವಾರಿಯ ೧೫—೧೫ | ಗುರುವಾರ | ಸಂಖ್ಯೆ ೭೦

ಕೌನ್ಸಿಲ್ ಮೀಟಿಂಗು.

ಕೂಡಗು ನ್ಯಾಯನಿರ್ಣಯಕ ಸಭೆಯ ಮೀಟಿಂಗು ತಾ. 8 ಮತ್ತು 9 ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯಿತು. ವಿದ್ಯಾಇಲಾಖಾ ಮೆಂಬರರನ್ನು ಬಿಟ್ಟು ಎಲ್ಲಾ ಸದಸ್ಯರೂ ಹಾಜರಿದ್ದರು. ಪ್ರಥಮತವಾಗಿ ಪ್ರತಿಜ್ಞಾ ವಿಧಿಯು ನಡೆಯಿತು. ಅನಂತರ ಅಧ್ಯಕ್ಷರು ಪ್ರಾರಂಭ ಭಾಷಣ ಮಾಡಿದರು.

ಪ್ರಾರಂಭ ಭಾಷಣ.

ಕೌನ್ಸಿಲು ಸಭೆಯಂಹೊಸ ಸದಸ್ಯರಾದ ನಿಮಗೆಲ್ಲರಿಗೂ ನನ್ನ ಸುಸ್ವಾಗತ. ಕಳೆದ ಸಾರಿ ಅಂದರೆ ಕಳೆದ ಅಕ್ಟೋಬರದಲ್ಲಿ ನಾವು ಸಭೆ ಸೇರಿದಾಗ ಯುದ್ಧದ ಪರಿಸ್ಥಿತಿ ಬಹು ಬಿಕ್ಕಟ್ಟಿನದಿತ್ತು. ಈಗ ಯುದ್ಧವು ಮುಗಿದಿದೆ. ಈ ಯುದ್ಧದಲ್ಲಿ ಭಾರತೀಯ ಯೋಧರು ಅದರಲ್ಲೂ ಕೊಡಗಿನ ವೀರರು ತೋರಿಸಿದ ಸಾಹಸ ಅನುಪಮವಾದುದು. ಈ ಶೌರ್ಯ ಪ್ರತಾಪಗಳು ಜಗತ್ತಿನ ಚರಿತ್ರೆಯಲ್ಲಿ ಅಳಿಸಲಾರದ ಚಿಹ್ನೆಯಾಗಿವೆ. ನಮ್ಮ ಚಿಕ್ಕ ಪ್ರಾಂತವು ಹಿಂದೂ ದೇಶದ ಪೃಥಮ ಎರಡು ಬ್ರಿಗೇಡಿಯರುಗಳನ್ನು ತಯಾರಿಸಿದ್ದು ಹೆಮ್ಮೆಯ ಮಾತು. ಸೈನ್ಯದ ವಿವಿಧ ಶಾಖೆಗಳಲ್ಲಿ ಕೊಡಗಿನಿಂದ ಹೋದ 2000 ಕ್ಕೂ ಮಿಕ್ಕ ಜನರಿರುವರು. ಇವರುಗಾಗಿ ಅನೇಕ ಸ್ಥಳಗಳನ್ನು ಕಾಪರಿಸಲಾಗಿದೆ. ಕೊಡಗಿನ ಕೆಲವು ಯುವಕರು ಇಂಡಿಯಾ ಸರಕಾರದಲ್ಲಿ ಸ್ಥಳಪಡೆಯಬಹುದು. ಕೊಡಗು ಮಾಡಿದ ಸೇವೆ, ತ್ಯಾಗಗಳಿಗಾಗಿ ಇಂಡಿಯಾ ಸರಕಾರದಿಂದ ಸಹಾಯಪಡೆಯಲು ನಾವು ಹಕ್ಕುದಾರರು. ಅದರಂತೆ ಸ್ಥಳೀಯ ಸರಕಾರವು ಸಹಾಯ ಕೇಳಿ ಬರೆದಿದೆ. ನಿಮ್ಮ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳದೆ ಕಾರ್ಯಕ್ರಮಕ್ಕೆ ಪ್ರಾರಂಭಿಸುವಾ.

ಪ್ರಶ್ನೋತ್ತರಗಳು ನಡೆದನಂತರ ಸಭೆಯ ಕಾರ್ಯದರ್ಶಿಗಳು ಅನಂತರ ಕಳೆದ ಮೀಟಿಂಗಿನಲ್ಲಿ ಪಾಸಾದ ಗೊತ್ತುವಳಿಗಳ ಮೇಲೆ ಚೀಫ್ ಕಮಿಷನರ ಅಪ್ಪಣೆಯನ್ನು ಸಭೆಯ ಮುಂದಿರಿಸಿದರು. ನಂತರ ಠರಾವುಗಳ ಚರ್ಚೆ ನಡೆಯಿತು.

ಪಾಸಾದ ಠರಾವುಗಳು.

1. 'ಇಂಡಿಯಾ ಕಾಫಿ ಬೋರ್ಡಿನಲ್ಲಿ ಕೊಡಗು ಇಂಡಿಯನ್ ಪ್ಲಾಂಟರುಗಳ ಸಂಸ್ಥೆಗೆ ಒಂದು ಸ್ಥಳ ಕೊಡಿಸುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳೊಡನೆ ಏರ್ಪಾಡು ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಪಾರಸ್ಸು ಮಾಡುತ್ತದೆ.'

2. ಕೊಡಗಿನ ಆದಾಯ ತೆರಿಗೆ (ಇನ್‌ಕಮ್ ಟೇಕ್ಸ್) ಯಿಂದ ಶೇಕಡ ಒಂದು ಭಾಗವನ್ನು ಸ್ಥಳೀಯ ಸರಕಾರಕ್ಕೆ ಕೊಡುವಂತೆ ಇಂಡಿಯಾ ಸರಕಾರವನ್ನು ಕೇಳಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಪಿ. ಐ. ಬೆಳ್ಯಪ್ಪನವರು.

(3) ಕಾಫಿ, ಹೊಗೆಸೊಪ್ಪು, ಆಡಿಕೆ ಮೊದಲಾದುವುಗಳ ಮೇಲೆ ಹಾಕಿರುವ ಎಕ್ಸೈಸ್ ತೆರಿಗೆಯನ್ನು ನಿಲ್ಲಿಸಲು ಇಂಡಿಯಾ ಸರಕಾರವನ್ನು ಕೇಳಬೇಕಾಗಿ ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಎನ್. ಸೋಮಣ್ಣನವರು.

4. ಪಕ್ಕಾಯಕ್ಕೆ ಬಂದ ಎಲ್ಲಿ ಗುಡಿಗು, ಹೆಂಗಸರಿಗೆ ನ್ಯಾಯನಿರ್ಣಯಕ ಕಾರ್ಯದ ಸ್ಥಳೀಯ ಸಂಸ್ಥೆಗಳಿಗೆ ಮತಕೊಡುವ ಹಕ್ಕನ್ನು ಒದಗಿಸಿಕೊಡಲು ಸಮ್ಮಂಧಪಟ್ಟ ಅಧಿಕಾರಿಗಳೊಡನೆ ಏರ್ಪಾಡು ಮಾಡಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಪಿ. ಐ. ಬೆಳ್ಯಪ್ಪನವರು.

5. ಸವಾನುಕೂಲತೆಗಳಿಂದ ಸುಸಜ್ಜಿತವಾದ ಒಂದು ಆಸ್ಪತ್ರೆಯನ್ನು ಕೊಡಗಿನಲ್ಲಿ ಸ್ಥಾಪಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ. ಪಿ. ಎಂ. ನಾಣಮ್ಮಯ್ಯನವರು.

6. ಕೊಡಗಿನ ಸಿವಿಲ್ ಸರ್ಜನರ ಹುದ್ದೆಯನ್ನು ಸ್ಥಾಂತೀಕರಿಸುವಂತೆ ಕೇಂದ್ರ ಸರಕಾರವನ್ನು ಕೇಳಲು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ. ಪಿ. ಐ. ಬೆಳ್ಯಪ್ಪನವರು.

7. 1945.46 ರ ಸಾಲಿಗೆ ಬತ್ತ ಗಾಡಿಗೆ ರೂ. 125 ರಂತೆ ಧಾರಣೆ ನಿಯಂತ್ರಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ. ಎನ್. ಸೋಮಣ್ಣನವರು.

8. ಕೊಡಗಿನ ಉಳುವರಿ ಬತ್ತವನ್ನು ಮೈಸೂರು ಮತ್ತು ಮಲಬಾರು ಈ ಎರಡು ಪ್ರಾಂತಗಳಿಗೂ ರಪ್ತು ಮಾಡುವಂತೆ ಏರ್ಪಡಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಪಿ. ಐ. ಬೆಳ್ಯಪ್ಪನವರು.

9. ಮಡಿಕೇರಿ ಜಾನುವಾರುಗಳ ಆಸ್ಪತ್ರೆಯನ್ನು ಒಂದು ಮೊದರಿ ಆಸ್ಪತ್ರೆಯಾಗಿ ಮಾಡಿ ಬೇಕಾದ ಯಂತ್ರೋಪಕರಣಗಳು, ಪುಸ್ತಕಗಳು ಇಲ್ಲಿಂದ ಕೊಡಗಿನ ಉಳಿದ ಆಸ್ಪತ್ರೆಗಳಿಗೆ ದೊರೆಯುವ ಏರ್ಪಾಡು ಮಾಡಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ. ಪಿ. ಎಂ. ಪೂಣಚ್ಚನವರು.

10. ಶನಿವಾರಸಂತೆಯಲ್ಲಿ ಒಂದು ಜಾನುವಾರುಗಳ ಆಸ್ಪತ್ರೆಯನ್ನು ತೆರೆಯಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ, ಸೂಚಕರು ಶ್ರೀ ಕೆ. ಮುಲ್ಲಪ್ಪನವರು.

11. ಖಾಸಗಿ ಜಾಗದಿಂದ ಕೀಳುವ ಗರಸು ಮರಕ್ಕೆ ಕೊಡುವ ಬೋನಸ್ಸನ್ನು ಆದರ ಕ್ರಯದ ಶ್ರೀ ಕಡ 50 ಕ್ಕೆ ಏರಿಸುವಂತೆ ಆದಕ್ಕೆ ಸಂಬಂಧಿಸಿದ ಖಾನೂನನ್ನು ತಿದ್ದುಪಡಿಮಾಡಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಕೆ. ಮಲ್ಲಪ್ಪನವರು.

12. ಕೌನ್ಸಿಲ್ ವಾಚನಾಲಯವನ್ನು ಸಾಕಷ್ಟು ಉಪಯುಕ್ತ ಪುಸ್ತಕಗಳಿಂದ ಸಿದ್ಧಗೊಳಿಸಬೇಕು ಎಂದು ಈ ಸಭೆಯು ಸೂಚಿಸುತ್ತದೆ. ಸೂಚಕರು ಶ್ರೀ ಪಿ. ಎಂ. ಪೂಣಚ್ಚನವರು.

13. ಗುಡಿಕೈಗಾರಿಕೆಯಾಗಿ ಕೊಡಗಿನಲ್ಲಿ 'ಸೀರಂ' ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿ ಜಾರಿಯಲ್ಲಿ ತರಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಕೆ. ಮಲ್ಲಪ್ಪನವರು.

14. ಪೊನ್ನಂಪೇಟೆ, ನಾಪೋಕ್ಲು, ಸೋಮವಾರಪೇಟೆಗಳಲ್ಲಿ ಈಗ ಹೊಸದಾಗಿ ಸ್ಥಾಪಿತವಾಗಿರುವ ಪ್ರೈಸ್ಕೂಲುಗಳನ್ನು ಸರಕಾರವು ಆದಷ್ಟು ಬೇಗ ವಹಿಸಿಕೊಳ್ಳಬೇಕು ಎಂದು ಈ ಸಭೆಯು ಶಿಪಾರ್ಸ್ಸನ್ನು ಮಾಡುತ್ತದೆ, ಸೂಚಕರು ಶ್ರೀ ಪಿ. ಎಂ. ನಾಣಮ್ಮಯ್ಯನವರು.

15. ಕೇಂದ್ರ ರಿಕಾರ್ಡ್ ರೂಮಿನ ರಿಕಾರ್ಡುಗಳನ್ನು ಸರಿಯಾಗಿಟ್ಟು ಅದಕ್ಕೆ ಅವಶ್ಯವಾದ ಸೂಚಿಪತ್ರವನ್ನು ತಯಾರಿಸಲು ಬೇಕಾದ ಏರ್ಪಾಡುಗಳನ್ನು ಮಾಡಬೇಕು ಎಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಎನ್. ಸೋಮಣ್ಣನವರು.

16. ಹದಮುರದ ಮೂರಾಟದಿಂದ ಬರುವ ಉತ್ಪತ್ತಿಯಲ್ಲಿ ರೂ. 50000 ವನ್ನು ಬೇರಿಟ್ಟು ಗ್ರಾಮಗಳಲ್ಲಿನ ಪೈಕಾಯಿಲ್ಲಿಯ ಲಂತಾನವನ್ನು ನಿರ್ಮೂಲಮಾಡಿ ದನಕರುಗಳಿಗೆ ಮೇಯುವ ಅನುಕೂಲತೆ ಕಲ್ಪಿಸಲು ವಿನಿಯೋಗಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಪಿ. ಐ. ಬೆಳ್ಯಪ್ಪನವರು.

17. ಸ್ಥಳೀಯ ಸರಕಾರವು ತನ್ನ ಆಧೀನಕ್ಕೆ ತೆಗೆದುಕೊಳ್ಳಲಿರುವ ರಸ್ತೆಗಳ ಸರ್ವೆ, ಅಭಿವೃದ್ಧಿ, ಉಸ್ತುವಾರಿಯ ಬಗ್ಗೆ ಒಂದು ಕಾರ್ಯಯೋಜನೆಯನ್ನು ತಯಾರಿಸಲು ಉದ್ಯೋಗಸ್ಥರ ಮತ್ತು ಅಲ್ಲದವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಬೇಕು. ಸೂಚಕರು ಶ್ರೀ ಸೋಮಣ್ಣನವರು.

18. ಚಿಟ್ಟಳ್ಳಿ-ಸುಂಟಿಕೊಪ್ಪ ರಸ್ತೆಯನ್ನು ಕಲ್ಲುಜಾಕಿ ಪೂರೈಸಿ ಆ ರಸ್ತೆಯಲ್ಲಿರುವ ಸೇತುವೆಯನ್ನು ಭಾರವಾದ ವಾಹನಗಳಿಗೆ ಯೋಗ್ಯವಾಗುವಂತೆ ಬೇಗಮಾಡಬೇಕು ಸೂಚಕರು ಶ್ರೀ ಕೆ. ಪಿ. ಅಪ್ಪಯ್ಯನವರು.

19. ಮುಫತ್ತಾದ ಮತ್ತು ಖಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕು ಎಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಕೆ. ಪಿ. ಅಪ್ಪಯ್ಯನವರು.

20. ಉತ್ತರ ಕೊಡಗಿನ ಎಲ್ಲಾ ಕೆದಿಗಳನ್ನು ದುರಸ್ತುಗೊಳಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ. ಸೂಚಕರು ಶ್ರೀ ಕೆ. ಮಲ್ಲಪ್ಪನವರು.

21. ತಮ್ಮ ಕರ್ತವ್ಯಗಳನ್ನು ದಕ್ಷತೆಯಿಂದ ಮಾಡಲು ಗ್ರಾಮ ಪಠೇಲರುಗಳಿಗೆ ಅವಶ್ಯಕವಾದ ತರಬೇತು ಕೊಡಲು ತಕ್ಕ ಏರ್ಪಾಡು ಮಾಡಬೇಕು. ಸೂಚಕರು ಶ್ರೀ ಎನ್. ಸೋಮಣ್ಣನವರು.

22 ಈ ಪ್ರಾಂತದಲ್ಲಿರುವ ಮಲೇರಿಯಾವನ್ನು ಪೂರ್ಣವಾಗಿ ನಿವಾರಿಸಲು ತಕ್ಕ ಏರ್ಪಾಡುಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಪಿ ಎಂ ನಾಣಮ್ಮಯ್ಯನವರು

23 ಕತ್ತಳೆ ಮೊದಲಾದ ಉಪವ್ಯವಸಾಯಗಳಿಗೆ ತಮ್ಮ ಸ್ವಂತ ಯೋಗ್ಯ ಜಾಗವಿಲ್ಲದೆ ಜಾಗಕ್ಕೆಗಿ ಅರ್ಜಿಹಾಕುವ ಶನಿವಾರಸಂತೆ ಮತ್ತು ಸೋಮವಾರಪೇಟೆಯ ಅರ್ಜಿದಾರರಿಗೆ ಹೆಚ್ಚಾಗಿ ಜಾಗಕೊಡಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಕೆ ಮಲ್ಲಪ್ಪನವರು

24 ತಪ್ಪು ಕೊಲೆಗಳನ್ನು ಪತ್ತೆಮಾಡಲು ಪೊಲೀಸ್ ಇಲಾಖೆಯಲ್ಲಿ ಒಂದು ಶಾಖೆಯನ್ನು ಸ್ಥಾಪಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಪಿ ಐ ಬೆಳ್ಯಪ್ಪನವರು

25 ಉದ್ಯೋಗಸ್ಥರಲ್ಲದವರ ಬಿಹುಮತವಿರುವ ಐದು ಜನರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಿ ಶ್ರೀಮಂಗಲನಾಡಿನ ಕೊಲ್ಲಿಭೂಮಿಯಿಂದ ನೀರನ್ನು ಒಣಗಿಸಲು ಬೇಕಾದ ಯೋಜನೆಯನ್ನು ತಯಾರಿಸಿ ಈ ಕೌನ್ಸಿಲಿನ ಮುಂದಿಡಲು ಏರ್ಪಡಿಸಬೇಕೆಂದು ಈ ಸಭೆಯು ಶಿಪಾರಸು ಮಾಡುತ್ತದೆ ಸೂಚಕರು ಶ್ರೀ ಪಿ. ಎಂ ನಾಣಮ್ಮಯ್ಯನವರು

26 ರೇಶ್ಮೆ ಕೈಗಾರಿಕೆಯನ್ನು ಕೊಡಗಿನಲ್ಲಿ ಕೈಕೊಳ್ಳುವ ಸಾಧ್ಯತೆಯ ಬಗ್ಗೆ ಪರಿಶೀಲಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಕೆ. ಮಲ್ಲಪ್ಪನವರು.

27 ರಿಜರ್ವ್ ಫಾರೆಸ್ಟುಗಳಿರುವಲ್ಲಿ ಊರುಗು ಪ್ಪೆಯ ಸುತ್ತಲಿನ ಎರಡು ಮೈಲುಗಳ ಆವರಣದ ಕಾಡುಗಳನ್ನು ತೆಗೆದು ಹಾಕಲು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಕೆ. ಮಲ್ಲಪ್ಪನವರು.

ಹಿಂತೆಗೆಯಲ್ಪಟ್ಟ ಠರಾವುಗಳು.

(1) ಇಂಡಿಯಾ ಸರಕಾರದಿಂದ ರಚಿಸಲ್ಪಡಬೇಕೆಂತೆ ಸೂಚಿಸಲ್ಪಟ್ಟಿರುವ 'ಕಾನ್‌ಸ್ಟಿಟ್ಯುಯೆಂಟ ಎಸೆಂಬ್ಲಿ'ಯಲ್ಲಿ ಕೊಡಗು ಸ್ವಾಂತ್ಯಕ್ಕೆ ಸ್ವಾತಿನಿಧ್ಯ ದೊರೆಯುವಂಥಾ ಏರ್ಪಾಡು ಮಾಡಲು ಇಂಡಿಯಾ ಸರಕಾರವನ್ನು ಕೇಳಿಕೊಳ್ಳಲು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಪಿ ಐ ಬೆಳ್ಯಪ್ಪನವರು

2 ಮದ್ರಾಸು ವಿಶ್ವವಿದ್ಯಾಲಯದ ಸೆನೆಟ್‌ನಲ್ಲಿ ಕೊಡಗಿಗೆ ಮೂರು ಸೀಟುಗಳನ್ನು ಒದಗಿಸುವ ಏರ್ಪಾಡನ್ನು ಮದ್ರಾಸು ಸರಕಾರದೊಡನೆ ಮಾಡಲು ಈ ಸಭೆಯು ಶಿಪಾರಸ್ಸು ಮಾಡುತ್ತದೆ ಸೂಚಕರು ಶ್ರೀ ಸಿ ಎಂ ಪೂಣಚ್ಚನವರು

3 ಬತ್ತದ ಈಗಿನ ನಿಯಂತ್ರಿತ ಬೆಲೆಯನ್ನು ನಿಯಂತ್ರಣವು ಇರುವ ವರೆಗೆ ಕೊನೆ ಮಾಡಕೂಡದು ಸೂಚಕರು ಶ್ರೀ ಪಿ ಐ ಬೆಳ್ಯಪ್ಪನವರು (ಗಾಣಿಗೆ ರೂ 125 ಇರಬೇಕೆಂಬ ಠರಾವು ಏಕಾಏಕಿ ಕಾರಣವಾದ ಕಾರಣವನ್ನು ತೆಗೆದುಕೊಂಡಿತು)

4 ಮದ್ರಾಸಿನ ಇಂಜಿನಿಯರಿಯ ವೈದ್ಯಕೀಯ ಕಾಲೇಜುಗಳಲ್ಲಿ ಸೇರಿಕೊಡಗಿನ ವಿದ್ಯಾರ್ಥಿಗಳಿಂದ ಸೂಚಿಸಲ್ಪಟ್ಟಿದಂತೆ ಮದ್ರಾಸ್ ಳಬೇಕು ಸೂಚಕರು (ಹೆಚ್ಚಿನ ಫೀಜಸ್ ಡುವ ಭ ಟ್ಟಿತು)

(5) ಎ ಫ್ರ ನೇಮಿಸಬೆ ದ ಶ್ರೀ ಸಿ ಎರಿ ಮೇರೆ ವಾಪಾ

(6) ಯ ರ್ಯರೂಪದ ಡಲು ಒಂದು ನೇಮಿಸಬೇಕ್ಷ ವರು

(7) ಕುಪ್ಪೆ ಹಾತೂರಿನಿಂದ ಕಲ್ಲುಹಾಕಿಸ ರು ಶ್ರೀ ಎಚ

(8) ಈ ಕಡಿಮೆ ಮೂಡ ತ್ತು ಸೋಮವ ಹಾಕಿದ್ದನ್ನು ಗ್ಯ ಕ್ರಮ ಕೈ ಮಲ್ಲಪ್ಪನಹರು

(9) ಈಗಿರುವ ನಾಯಿವ ವಾಗುವಂ ಜೇಕು ಸ

(10) ಕ ರೂ 30 ದನ್ನೆ ಸೂಚಕ ವಾಪ

ಕ್ಕೆ ತ ಸ ಜ್ಞೆ ಮ ಕ ರಾರ ಕು ಸ : ವಾಯಿ

ಕೊ ಡ ಗು

ತಾ. ೧೨-೧೦-೧೯೪೫ನೇ ಶುಕ್ರವಾರ

ಕೌನ್ಸಿಲ್ ತೀರ್ಮಾನಗಳು.

ಕೊಡಗು ನ್ಯಾಯವಿಧಾಯಕ ಸಭೆಯು ವಿರಾಟಂಗು ತಾ. 8 ಮತ್ತು 9ರ ಲ್ಲಿ ನಡೆಯಿತು. ವಿರಾಟಂಗಿಗೆ ಒಟ್ಟು 40 ಠರಾವುಗಳು ಕಳುಹಿಸಲ್ಪಟ್ಟಿದ್ದವು. ಇವುಗ ಲ್ಲಿ 33 ಠರಾವುಗಳು ಸಭೆಯಲ್ಲಿ ಚರ್ಚೆ ವು. ಚರ್ಚಿಸಲ್ಪಟ್ಟವುಗಳಲ್ಲಿ 25 ಪಾಸಾದವು. 8 ಠರಾ ರದ ಭರವಸೆ ಮೇಲೆ ಹಿಂ ಲ್ಪಟ್ಟವು. ಪಾಸಾದ ಠರಾ ಗ್ರಾಮಮುಖ್ಯವಾದವುಗಳ ಕಿಸುವೆವು.

ದು ಭಾಗವ ೇಕೆಂದು

ಲ್ಲಾ ಪ್ರಾಂ ವಸೂಲು ು ಒಂದು ಕೆಲವು ನಿಶ್ಚಯಿಸ ಉತ್ಪತ್ತಿ ತ್ತಿರಲಿಲ್ಲ. ಬಾಬಿನ ಗ ಆದು ಪ ್ಯಗುತ್ತಿದೆ. ಆಧಿಕಾ ತ್ಪತ್ತಿಯ ನಕಾದದ್ದು

ಒದಗಿಸ ು ಕಾಫಿ, ಾದಲಾದು ನ್ನು ಎ ರೆ. ಇ ಲಕ್ಷ ಯಿಂದು ರಕಾರ ಯೋ ನನ್ನು ರವು ು ಸು

ದ ಪಾಸಾಯಿತು. ಈಗ ಕೊಡಗಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಮುಪ್ಪತ್ತಾ ಗಿ ಕೊಡಲ್ಪಡುತ್ತಿದೆ. ಇದನ್ನು ಸಂಪೂರ್ಣ ಖಡ್ಡಾಯ ಶಿಕ್ಷಣವಾಗಿ ಮಾಡಬೇಕಾದ ರೆ ನಾಲ್ಕು ಲಕ್ಷಕ್ಕಿಂಥಾ ಹೆಚ್ಚಿನ ಖರ್ಚು ವರ್ಷಕ್ಕೆ ಉಪಾಧ್ಯಾಯರ ವೇತನಕ್ಕಾಗಿ ಯೇ ಬೇಕಾಗುವದರಿಂದ ಮುಂದೆ ಉತ್ತ ರ ಕೊಡಗಿನ ಕೆಲವು ಗ್ರಾಮಗಳಲ್ಲಿ ಮೂ ತ್ರ ಇದನ್ನು ಖಡ್ಡಾಯವಾಗಿ ಜಾರಿಗೆ ತ ರಲಾಗುವದೆಂದು ಸರ್ಕಾರಿ ಮೆಂಬರು ವಾದಿಸಿದರು. ಪ್ರಾಥಮಿಕ ಶಾಲೆಗಳಿಗೆ ಹೋಗಬಹುದಾದ 19 ಸಾವಿರ ಮಕ್ಕಳ ಪೈಕಿ ಈಗ ಬರೀ 10 ಸಾವಿರ ಮಾತ್ರ ಹೋಗುತ್ತಿರುವುದರಿಂದಲೂ, ಅನುಕೂಲ ಸ್ಥರ ಮಕ್ಕಳೇ ಈಗ ವಿದ್ಯಾಭ್ಯಾಸವನ್ನು ಪಡೆಯುವುದರಿಂದಲೂ ಬಡತನದಲ್ಲಿರುವ ಮತ್ತು ಹಿಂದುಳಿದವರ ಮಕ್ಕಳನ್ನು ವಿ ದ್ಯಾವಂತರನ್ನಾಗಿ ಮಾಡಲು ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯವಾಗಿ ಮಾಡಬೇ ಕಾದುದು ಅತೀ ಆವಶ್ಯ. ಇಂಥಾ ಅತ್ಯ ಗತ್ಯವಾದ ಕೆಲಸಕ್ಕೆ ಹಣದ ಅಭಾನವ ನ್ನು ಮುಂದೊಡ್ಡುವದು ಉಚಿತವಲ್ಲ. ಇ ದನ್ನು ಒಂದೆರಡು ಗ್ರಾನುಗಳಲ್ಲಿ ಜಾರಿಗೆ ತರುವದರ ಬದಲು ಕ್ರಮಶಃ ಬರುವ 5 ವರ್ಷಗೂಳೆಗಾದರೂ ಇಡೀ ಕೊಡಗಿನ ಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಖಡ್ಡಾ ಯವಾಗಿ ಕೊಡಲ್ಪಡುವಂತೆ ವಿಪರ್ಡಿಸಬೇ ಕಾದುದು ಸರಕಾರದ ಆದ್ಯ ಕರ್ತವ್ಯ.

ದೇಶದಲ್ಲಿ ಮಲೇರಿಯಾ ಜ್ವರವು ಹೆ ಚ್ಚಾಗಿ ಹಬ್ಬುತ್ತಿರುವದು ವಿಷಾದಕರ. ಇದರಿಂದಾಗಿ ಜನತೆಯ ಆರೋಗ್ಯವು ಕೆ ಟ್ಟು, ರೋಗ ಪ್ರತಿರೋಧಕ ಶಕ್ತಿಯನ್ನು ಕಳಕೊಂಡು ನಿರ್ಬಲರಾಗು ತ್ತಿರುವರು. ಕೊಡಗಿನ ಜನಜೀವನವ ನ್ನು ಸೂರೆಗೊಳ್ಳುತ್ತಿರುವ ಈ ಮಹಾಮಾ ರಿಯನ್ನು ನಿವಾರಿಸಲು ಕೌನ್ಸಿಲಿನಲ್ಲಿ ಅಂ ಗೀಕೃತವಾಗಿರುವ ಈ ಠರಾವನ್ನು ಶೀಘ್ರ ಅಮಲಿನಲ್ಲಿ ತರುವದು ಯುಕ್ತವಾಗಿದೆ.

ವ್ಯವಸಾಯ ದೇಶವಾದ ಕೊಡಗಿನಲ್ಲಿ ಲಂತಾನದ ದೆಸೆಯಿಂದ ಹುಲ್ಲುಗಾವಲು ಗಳು ಕಡಿಮೆಯಾಗಿ ದನಗಳ ಸಾಕುವಿಕೆಗೆ ತುಂಬಾ ಅಡಚಣೆಯಾಗಿದೆ. ಆದ್ದರಿಂದ ಸರಕಾರದವರು ಲಂತಾನ ನಿರ್ಮೂಲನ ಕಾರ್ಯಕ್ಕೆ ಕೈ ಹಚ್ಚಬೇಕಾದುದು ತುರಿ ತದ ಕೆಲಸವಾಗಿದೆ. ಯುದ್ಧದ ದೆಸೆಯಿಂ ದ ಪೈಸಾರಿಯಲ್ಲಿರುವ ಮರಗಳ ಮೂರಾ ಟದಿಂದ ಇನ್ನು ಐದು ವರ್ಷಗಳಲ್ಲಿ ಸು ಮಾರು 6 ಲಕ್ಷ ರೂಪಾಯಿಗಳ ಉತ್ಪತ್ತಿ ಬರುವಂತಿದೆ. ಇದರಲ್ಲಿ ಒಂದು ಭಾಗ ವನ್ನು ವರ್ಷಂಪ್ರತಿ ಗ್ರಾಮಗಳ ಮಧ್ಯ ದಲ್ಲಿರುವ ಪೈಸಾರಿಯಲ್ಲಿಯ ಲಂತಾನ ತೆ ಗೆಯಲು ಉಪಯೋಗಿಸಬೇಕೆಂದು ಕೌ ನ್ಸಿಲಿನಲ್ಲಿ ಸೂಚಿಸಲ್ಪಟ್ಟ ಠರಾವನ್ನು ಸರ ಕಾರಿ ಮೆಂಬರು ಒಪ್ಪಿಕೊಂಡದ್ದು ತೃಪ್ತಿ ಕರ. ಆದರೆ ಅದನ್ನು ಕೆಲಸಗಾರರ ಅ ಭಾವವೆಂದು ಸಾವಕಾಶಮಾಡದೆ ಬರುವ ಐದು ವರ್ಷಗಳೊಳಗೆ ವ್ಯವಸಾಯಗಾರರಿ ಗೆ ಆವಶ್ಯವಿರುವ ಎಲ್ಲಾ ಪೈಸಾರಿಗಳಲ್ಲಿ ಲಂತಾನ ನಾಶಮಾಡಲು ಪ್ರಯತ್ನಿಸುವ ರಾಗಿ ನಂಬುತ್ತೇವೆ.

ಹೊಸದಾಗಿ ಪ್ರಾರಂಭಿಸಲ್ಪಟ್ಟಿರುವ ಹೈಸ್ಕೂಲುಗಳನ್ನು ಕೂಡಲೇ ಸರಕಾರದ ವರು ವಹಿಸಿಕೊಳ್ಳಬೇಕೆಂದೂ, ಸಿವಿಲ್ ಸ ರ್ಜನರ ಹುದ್ದೆಯನ್ನು ಪ್ರಾಂತೀಕರಿಸಬೇ ಕೆಂದೂ ಮಾಡಿದ ಗೊತ್ತುವಳಿಗಳನ್ನು ಸರ ಕಾರದವರು ಕೂಡಲೇ ಜಾರಿಗೆ ತರುವ ರೆಂದು ಆಶಿಸುತ್ತೇವೆ.

ಯುದ್ಧವು ಮುಗಿದುದರಿಂದ ಆರ್ಥಿ ತ ಮುಗ್ಗಟ್ಟಿನ ಕಾಲವು ಪ್ರಾರಂಭಿಸುತ್ತಿ ರುವ ಈ ಸಮಯದಲ್ಲಿ ಕೊಡಗಿನ ರೈತರ ಜೀವನಾಧಾರವಾದ ಬತ್ತದ ಬೆಲೆಯನ್ನು ಇಳಿಸಿದ್ದೇ ಆದರೆ ಅವರು ಮುಗ್ಗರಿಸಬೇ ಕಾದುದರಲ್ಲಿ ಸಂಶಯವಿಲ್ಲ. ಆದುದರಿಂದ ಕೆಲವು ಸಮಯದ ವರೆಗಾದರೂ ಈಗಿರು ವ ಬೆಲೆಯನ್ನೇ ಇಡಬೇಕಾದುದು ಅತೀ ಅವಶ್ಯ. ಅಲ್ಲದೆ ಕೊಡಗಿನ ಹೆಚ್ಚಾದ ಬ ತ್ತವನ್ನು ಮೈಸೂರಿಗೆ ರವಾನಿಸುವದರಲ್ಲಿ ಈ ವರ್ಷ ರೈತರಿಗೆ ಉಂಟಾದ ಕಷ್ಟನಷ್ಟ ಗಳನ್ನು ಗಣನೆಗೆ ತೆಗೆದುಕೊಂಡು ಬರುವ ವರ್ಷ ಮೈಸೂರಿಗೂ ಮತ್ತು ಮಲಬಾರಿ ಗೂ ಬತ್ತವನ್ನು ಕೊಡುವಂತೆ ಮಾಡಿದ ಕೌನ್ಸಿಲು ತೀರ್ಮಾನಕ್ಕೆ ಸರಕಾರದವರು ಮಾನ್ಯತೆ ಕೊಡದಿದ್ದರೆ ರೈತರ ಪಾಡು ಮ ತ್ತಷ್ಟು ಅಧೋಗತಿಗಿಳಿಯುವದರಲ್ಲಿ ಸಂಶ ಯವಿಲ್ಲ.

ಕೊಡಗಿನ ಕ್ರಿಮಿನಲ್ ಮುಖ್ಯವಾಗಿ ಕೊಲೆ ಕೇಸುಗಳು ಪತ್ತೆಯಾಗಿ ಶಿಕ್ಷಿಸಲ್ಪ ಡುವದು ಬಹು ಕಡಿಮೆಯಾದ ಕಾರಣ ಜನತೆಯಲ್ಲಿ ತಮ್ಮ ಪ್ರಾಣ ಮತ್ತು ಆಸಿ ಪಾಸ್ತಿಗಳ ಸುರಕ್ಷಿತತೆಯ ವಿಚಾರ ಒಂ ದು ತರದ ಭೀತಿಯು ಹುಟ್ಟಿರುವದರಿಂದ, ಇದಕ್ಕೆ ಕಾರಣ ಪೊಲೀಸರ ಶ್ರದ್ಧಾಹೀನ ತೆಯೋ, ಲಾಯರುಗಳ ಮಹತ್ವವೋ ಯಾ ನ್ಯಾಯಸ್ಥಾನಗಳ ಉದಾಸೀ ನತೆಯೊ, ಯಾವುದೆಂಬುದು ಗೊತ್ತಾ ಗುವದಿಲ್ಲ. ಸರಕಾರದವರು ಇದನ್ನು ಕಂಡು ಹಿಡಿದು ಸರಿಪಡಿಸದಿದ್ದರೆ ಜ ನರನ್ನು ರಕ್ಷಿಸುವ ಬಗ್ಗೆ ಜನತೆಗೆ ಸರ ಕಾರದ ಮೇಲಿರುವ ವಿಶ್ವಾಸವು ದಿನೇ ದಿ ನೇ ಕಡಿಮೆಯಾಗುವದರಲ್ಲಿ ಸಂಶಯವಿಲ್ಲ.

ವರ್ತಮಾನ.

1945 ಅಕ್ಟೋಬರ್ 15ನೇ ದಿನ ಬೆಳಿಗ್ಗೆ 2 ಗಂಟೆಯಿಂದ ಯುದ್ಧಕ್ಕೆ ಮೊ ದಲಿದ್ದ ಹಳೇ 'ಸ್ಟೇಂಡರ್ಡ್ ಟೈಮ'ನ್ನು ಜಾರಿಗೆ ತರುವಂತೆ ತೀರ್ಮಾನವಾ ಗಿದೆ.

1946-47 ನೇ ವರ್ಷದ ಕೊಡಗು ಸರಕಾರದ ಆದಾಯ ವೆಚ್ಚವನ್ನು ಪರಿಶೀ ಲಿಸುವ ಆರ್ಥಿಕ ಪರಿಶೋಧನಾ ಸಮಿತಿಗೆ ಶ್ರೀಗಳಾದ ಸಿ. ಎಂ. ಪೂಣಚ್ಚ, ಪಿ. ಐ. ಬೆಳ್ಯಪ್ಪ ಮತ್ತು ಪಿ. ಎಂ. ನಾಣಮ್ಮಯ್ಯ ಇವರುಗಳನ್ನು ಆರಿಸಲಾಗಿದೆ.

ತಾರೀಕು. 2-10-45 ರಲ್ಲಿ ಮಡಿ ಕೇರಿ ವಿದ್ಯಾರ್ಥಿ ಕಾಂಗ್ರೆಸಿನ ಆಶ್ರಯದ ಲ್ಲಿ ಮಡಿಕೇರಿ ಹೈಸ್ಕೂಲು ವಿದ್ಯಾರ್ಥಿಗಳು ಹೈಸ್ಕೂಲ್ ಆವರಣದಲ್ಲಿ ತ್ರಿವರ್ಣಧ್ವಜಾ ರೋಹಣ ಮಾಡಿ ಮಹಾತ್ಮರ ಧೀರ್ಘಾ ಯುಷ್ಯಕ್ಕೆ ಪ್ರಾರ್ಥಿಸಿದರು.

ಕೊಡಗು ಪಬ್ಲಿಕ್ ಸರ್ವೆಂಟ್ಸ್ ಸಹ ಕಾರ ಸಂಘದ ಮಹಾಸಭೆಯು ತಾ. 3-11-45 ರಲ್ಲಿ ನಡೆಯುವದು.

ಶ್ರೀ ಕಾಯಪಂಡ ದೇವಯ್ಯನವರು ರೂ. 500 ನ್ನು ಕೊಡಗು ವಿದ್ಯಾನಿಧಿಗೆ ಕೊಟ್ಟು ಆದರ ಜೀವಾವಧಿ ಸದಸ್ಯರಾಗಿ ರುವರು.

ತಾ. 21-10-45ರಲ್ಲಿ ವೀರಾಜಪೇ ಟೆ ಶ್ರೀಕಾವೇರಿ ಆಶ್ರಮದಲ್ಲಿ ಕಾವೇರಿ ತೀ ರ್ಥ ಪೂಜೆಯು ನಡೆಯುವದು. ಈ ಸಂದ ರ್ಭದಲ್ಲಿ ಹರಿಕಥಾಶ್ರೇಷ್ಠ ಬಿ. ಕೆ. ಗೋ ಪಾಲದಾಸರ ಹರಿಕಥೆಯು ನಡೆಯು ವುದು.

ಹೆಚ್ಚು ಆಹಾರ ಬೆಳೆಸುವ ಯೋಜನೆ ಗೆ ಇಂಡಿಯಾ ಸರಕಾರದವರು 1946-47 ನೇ ವರ್ಷಕ್ಕೆ ಧನ ಸಹಾಯವೂಡಲಿ ರುವರೆಂದೂ, ಪಾಳುಭೂಮಿ ರೂಡಿಸುವ, ಕೆರೆ, ನಾಲೆ ರಿಪೇರಿಮಾಡುವ ಕೆಲಸವನ್ನು ಕೈಕೊಳ್ಳುವವರು ಆದರ ವಿವರ ಸಹಿತ ಆ ಯಾಯ ವ್ಯವಹಾರಕ್ಷೇತ್ರದ ಆಹಾರ ಬೆ ಳೆಸುವ ಪ್ರಚಾರ ಮಾಡುವ ಅಧಿಕಾರಿಗಳಿ ಗೆ ತಾ. 31-12-45ರೊಳಗೆ ಅರ್ಜಿ ಬ ರಕೊಳ್ಳಬಹುದೆಂದೂ ಪ್ರಕಟವಾಗಿದೆ.

ತಾ. 29-9-45 ರಲ್ಲಿ ಗಾಂಧಿ ಜ ಯಂತಿಯ ಸಂಬಂಧ ನೂಲುವ ಸ್ಪರ್ಧೆ ಯು ಪೊನ್ನಂಪೇಟೆಯಲ್ಲಿ ನಡೆಯಿತು. ತಾರೀಕು 1—10—45 ರಲ್ಲಿ ಪೇಟೆಯ ಬೀದಿಗಳಲ್ಲಿ ಗಾಂಧೀಜಿಯ ವರ ಭಾವ ಚಿತ್ರದೊಡನೆ ಮೆರವಣಿಗೆಯೂ ದ ನಂತರ ಶ್ರೀ. ಕೆ. ಸಿ. ಕರುಂಬಯ್ಯನವ ರ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿತು. ಶ್ರೀ ಗಳಾದ ಎಂ. ಬಿ. ಮುತ್ತಣ್ಣ, ಡಾ. ಪಿ. ಎಂ. ನಾಣಮ್ಮಯ್ಯ ಮತ್ತು ಹರಿದಾಸ ಬಿ. ಕೆ. ಗೋಪಾಲದಾಸ ಇವರುಗಳು ಭಾಷಣ ಮಾಡಿದರು. ಅಧ್ಯಕ್ಷರ ಮು ಕ್ತಾಯ ಭಾಷಣದಿಂದ ವಿರಾಟಂಗು ಅಂ ತ್ಯಗೊಂಡಿತು. ಈ ದಿನ ಬಡ ಬಗ್ಗರಿಗೆ ಅಕ್ಕಿ ದಾನಕೊಡಲಾಯಿತು.

ತಾ. 2-10-45 ರಲ್ಲಿ ಗೋಣಿಕೊ ಪ್ಪಲಲ್ಲಿ ಬೆಳಿಗ್ಗೆ ವಾದ್ಯ ಘೋಷಗಳೊಡನೆ ಪ್ರಭಾತಫೇರಿ, ಧ್ವಜಾರೋಹಣ ನಡೆದ ನಂತರ ಶ್ರೀ. ಸಿ. ಎಂ. ಪೂಣಚ್ಚನವರ ಅ ಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆ ಯಿತು. ಲಾ ಕಾಲೇಜು ವಿದ್ಯಾರ್ಥಿಗ ಳಾದ ಶ್ರೀ. ಬಿ ನಾರಾಯಣ ಮೂರ್ತಿ ಯವರು ಕನ್ನಡದಲ್ಲಿಯೂ, ಆಂಧ್ರ ದೇಶ ದ ಶ್ರೀ. ಎಸ್. ಜಿ. ಮಹಾಬುಬ್‌ರವರು ಹಿಂದಿಯಲ್ಲಿಯೂ ಮಹತ್ಮರ ಗುಣಗಾನ ಮಾಡಿದರು. ಶ್ರೀ. ಎ. ಎಸ್. ಚಿಂಣಪ್ಪ ನವರ ವಂದನೆಯೊದನಂತರ ಬಡವರಿಗೆ ಅಕ್ಕಿದಾನ, ನೆರೆದ ಮಹಾನಿಯರಿಗೂ, ಬಾಲಕ ಬಾಲಕಿಯರಿಗೂ ಫಲಹಾರ ಹಂ ಚಲಾಯಿತು.

ನಾಪೋಕ್ಲಿನಲ್ಲಿಯೂ ಮತ್ತು ವೀ ರಾಜಪೇಟೆನಾಡು ಬಾಡಗ ಗ್ರಾಮದಲ್ಲಿ ಯೂ ಗಾಂಧಿ ಜಯಂತಿಯನ್ನು ಯಥೋ ಚಿತವಾಗಿ ಆಚರಿಸಲಾಯಿತು.

ಕೊಡಗು

ಬಾತೆ೯.

ಪರಮಾಣು ಬಾಂಬನ್ನು ಕಂಡುಹಿಡಿದ ಜರ್ಮನನಾದ ಹಾನ್ ಎಂಬವರಿಗೆ 1944 ರ ರಸಾಯನ ಶಾಸ್ತ್ರದ ನೋಬೆಲ್ ಪಾರಿತೋಷಕವು ಕೊಡಲ್ಪಟ್ಟಿದೆ. ಹಾನನು ಅಮೇರಿಕದಲ್ಲಿರುವದಾಗಿ ವರದಿಯಾಗಿದೆ.

ಜನರಲ್ ಮೆಕಾರ್ಥರರ ಆಜ್ಞೆಯಂತೆ ಜಪಾನ್ ಮಂತ್ರಿಮಂಡಳವು ರಾಜಿನಾಮೆ ಕೊಟ್ಟಿದೆ.

ಸರ್ದಾರ್ ವಲ್ಲಭ ಭಾಯಿಯವರ ಅಖಂಡ ಸೇವೆಯ ಸ್ಮಾರಕಾರ್ಥವಾಗಿ ಬೊಂಬಾಯಿಯಲ್ಲಿ ಹತ್ತು ಸಾವಿರ ಜನರು ಕುಳಿತು ಕೊಳ್ಳುವಷ್ಟು ವಿಶಾಲವಾದ 'ಸರದಾರ್' ಹಾಲನ್ನು ಕಟ್ಟುವ ಯೋಜನೆಯೊಗಿ ಇದಕ್ಕ 7 ಲಕ್ಷ ರೂಪಾಯಿಯ ಅಂದಾಜು ಮೊಡಲಾಗಿದೆ.

ಅಂತರಾಷ್ಟ್ರೀಯ ಸೈನಿಕ ನ್ಯಾಯ ಸ್ಥಾನದಲ್ಲಿ ಜರ್ಮನ್ ಯುದ್ಧ ಕ್ರಿಮಿನಲುಗಳ ವಿಚಾರ ಪ್ರಾರಂಭವಾಗಿದೆ. ಗೋರಿಂಗ್, ಹೆಸ್ ನೊದಲಾದವರ ವಿಚಾರಣೆಯಾಗಲಿದೆಯಂತೆ.

ಬೊಂಬಾಯಿಯಲ್ಲಿ ಹಿಂದೂ ಮುಸ್ಲಿಂ ದಂಗೆಯೊಗಿ ನೂರಾರು ಜನರು ಸತ್ತು ಹಲವರು ಗಾಯಗೊಂಡರು. ಸದ್ಯ ಪರಿಸ್ಥಿತಿ ಹತೋಟಿಯಲ್ಲಿದೆ.

ಇಂಡೊನೇಶಿಯಾದಲ್ಲಿ ತೀವ್ರ ಯುದ್ಧ ಪ್ರಾರಂಭವಾಗಿದೆ. ಡಾ. ಸೊಯಿಕರ್ಣನದ ಉದ್ಘಾಟನೆಯನ್ನು ಮೂಡುತ್ತಾ ಕಾಂಗ್ರೆಸು ಭಾಷಾನ್ವಯ ಪ್ರಾಂತ ರಚನೆಯ ತತ್ವವನ್ನು ಒಪ್ಪಿ ತನ್ನ ಆಡಳಿತದಲ್ಲಿ ಆ ರೀತಿ ವ್ಯವಸ್ಥೆ ಮೂಡಿರುವದು. ರಾಷ್ಟ್ರೀಯ ಸರಕಾರವು ಸ್ಥಾಪಿತವಾದ ಕೂಡಲೇ ಕಾಂಗ್ರೆಸು ಮೂಡುವ ಮೊದಲಿನ ಕಾಯಿದೆಯೆಂದರೆ ಭಾಷಾನುವಾರು ಪ್ರಾಂತ ರಚನೆಯ ಗಡಿ ನಿರ್ಣಯ ಕುರಿತು ಸಮಿತಿಯನ್ನು ನೇಮಿಸುವದಾಗ ಬಹುದು. ಆಂಧ್ರವು ಪ್ರತ್ಯೇಕ ಪ್ರಾಂತವಾದರೆ ಕರ್ನಾಟಕವೂ ಆಗದಿರದು ಎಂದಿರುವರು.

ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಸಹಾಯ ನೀಡತಕ್ಕುದಾಗಿ ಕಳೆದ ವಾರ ಬೊಂಭಾಯಿಯಲ್ಲಿ ಜರಗಿದ ಅ. ಭಾ. ವಿದಾರ್ಥಿ ಕಾ. ಕಾರ್ಯಭಾರ ಸಮಿತಿಯ ಸಭೆಯಲ್ಲಿ ನಿರ್ಣಯವಾಗಿ ಆ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಆಗಸ್ಟ್ ಚಳವಳಿಯ ಕಾಲಕ್ಕೆ ಬೆನಾರಿಸ್ ಜಿಲ್ಲೆಯ ಬೇರೆ ಬೇರೆ 15 ಸ್ಥಳಗಳಲ್ಲಿ ಪೊಲೀಸರು ಮಾಡಿದ ಗೋಳಿಬಾರಿನಿಂದ 17 ಜನ ಮರಣ ಹೊಂದಿದರು. 87 ಜನ ಗಾಯಗೊಂಡು 500 ಜನ ದಿಗ್ಬಂಧಿಸಲ್ಪಟ್ಟರು. ಸೆರೆಹಿಡಿಯಲ್ಪಟ್ಟ ಸುಮಾರು 2000 ಜನರಲ್ಲಿ 82 ಜನರಿಗೆ ಬೇರೆ ಬೇರೆ ಅವಧಿಯ ಶಿಕ್ಷೆಯಾಯಿತು. ಉಳಿದವರನ್ನು ಬಗೆ ಬಗೆಯಾಗಿ ಅಪಮಾನಗೊಳಿಸಿ ಬಿಡುಗಡೆ ಮಾಡಲಾಯಿತು. ಮೂವರಿಗೆ ಮರಣದಂಡನೆಯಾಯಿತು. 880040 ರೂ. ಗಳ ಸಾಮೂಹಿಕ ದಂಡ ವಸೂಲಾಗಿದೆ. ಇದರ ಇಮ್ಮಡಿ ಹಣ ಅಕ್ರಮ ರೀತಿಯಿಂದ ಅಧಿಕಾರಿಗಳು ವಸೂಲುಮಾಡಿದರೆಂದು ಹೇಳಲಾಗುತ್ತದೆ.

ಮಹಾತ್ಮಗಾಂಧಿಯವರ ಜಯಂತಿ ನಿಮಿತ್ತ ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲಂಡ್, ಕೆನಿಯಾಗಳಿಂದ ಅಭಿನಂದನ ಪರ ಸಂದೇಶಗಳು ಬಂದಿವೆ.

'ಕಾವೇರಿ ಮಹಲ್'

ನೂತನ ಸಮಾರಂಭೋತ್ಸವ.

ಸರ್ವರ ಮೆಚ್ಚಿನ, ಮನರಂಜನೆಯ ಚಲನ ಚಿತ್ರ ಮಂದಿರವಾದ ಮಡಿಕೇರಿಯ 'ಕಾವೇರಿ ಮಹಲ್' ಈ ಕಟ್ಟಡದ ಕೆಲಸವು ಮುಗಿಯುತ್ತಾ ಬಂದಿದೆ. ಕೊಡಗಿಗೆ ಶೋಭಾಯಮಾನವಾದ ಈ ಭವ್ಯ ಕಟ್ಟಡವನ್ನು ಕೊಡಗಿನ ಚೀಫ್ ಕಮಿಶನರಾದ ದಿವಾನ್ ಬಹದ್ದೂರ್ ಕೆ. ಚಂಗಪ್ಪ ಇವರ ಅಮೃತ ಹಸ್ತದಿಂದ ತೆರೆಯಲು ದಯವಿಟ್ಟು

ಸಮಾರಂಭೋತ್ಸವವು ಬರುವ ನವಂಬರ್

ಬೇಕಾಗಿದ್ದಾರೆ:

ಬುಕ್ಕ್ ಬೈಂಡಿಂಗ್ ಕೆಲಸ ಗೊತ್ತಿರುವವರೊಬ್ಬರು ಬೇಕಿದ್ದಾರೆ. ಲಿಂಗ್ ತಿಳಿದಿದ್ದರೆ ಉತ್ತಮ ವೇತನವನ್ನು ತಿಳಿಸಿ ಈ ಕೆ ಬರೆಯಿರಿ.

ವ್ಯವ
'ಅಂಬಿಕಾ ಪ್ರೆಸ್' ಕಾ

ಶೀಘ್ರದಲ್ಲೇ ಮಾರಾ

ಪೊನ್ನಂಪೇಟೆ ನಾಡಿನ ಡು ಗ್ರಾಮದಲ್ಲಿ ಬರೇ 12 ಕೂಡಿದ 15 ಏಕರು ನಾ ಏಕರು ಸಾಧಾರಣ ವಷ೯ ಕ್ಕೆ ಮೂರಾಟವಾಗುವ ಕಿತ್ತ ಏಕರು ನಿಂಬೆಹಣ್ಣು ತೋಟ, 6 ಏಕರು ಬಾ ಲ್ಲಿದ್ದು, ಹಂಚು ಹಾಕಿ ಗಳು, ಕಲ್ಲು ಕಟ್ಟಿದ ಟಿಯಿಂದ ಬರೇ ಎರಡು ಮೈಲು ರದಲ್ಲಿದ್ದು ಮೂರಾಟಕ್ಕಿವೆ. 20,000/- ಸಮೀಪದ ಸವ ಗೀಕರಿಸಲಾಗುತ್ತೆ.

ಪೊನ್ನಂಪೇಟೆ ಟೌನಿನಲ್ಲಿ ಗುಡಿಯ ಬಳಿ 42 ಸೆಂಟ್ಸು ಜಾ ವೂ ಮೂರಾಟಕ್ಕಿದೆ.

ಗೆ ಈ ಕೆಳಗಿನ ವಿ

ಪಿ. ಆರ್. ವೆ

ಜೋ

ಬ್ರೊ

CAUVERY ELECTRIC CORPORATION LTD.

having applied to the Government of Coorg for a ... as follows for generating and supplying electrical ... to the town of Virarajendrapet and the sur... area, notice is here-by given that every ...uthority, Company, or person desirous ... any represnetations with reference tothesaid ...on to the Government, may do so by letter ...ssed to the Chief Commissioner, Coorg, Mercara, ...in three months from the date of the issue of the ...per containing the first advertisement.

...ies of the draft licence and of the deposited ...y be inspected free at the Regi...tered Office of ...pany at Mercara and at the Municipal Office ...ndrapet. Copies of the draft licence are ... for sale at rupee one per copy at the Reg... ...ffice of the Company.

A. C. Madappa,
For the Cauvery Electric Corporation Ltd.

ಅಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಪೇಕಾಗಿದ್ದಾರೆ —

...ನಬಲಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾ...ಕರತನಗಳ ಮೇಲೆ ಕೊಡಗಿನ ಲಾಭಗಳಲ್ಲಿ ಜೀವನಿಸ್ಥಾಪಿಸಿದ್ದಾರೆ. ...ತ್ರ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
ಪಿ. ಬಿ. ನಂ. 337, ಮದ್ರಾಸು.

ಝಂಡು ರಸಾಯನ (ZANDU)

"ಶ್ವೇತ—ಥಾಸ್ಫೋ—ಮೂಲ್ಯ"
...ಗಳಿಗೂ ಬಂಧ್ಯೆ ಕಂಡರೂ ಪ್ರಯೋ...
ಬಾಂಗೆ, ಅಮೋಘ್ಯದಿಂದ...
...ಕ್ಷಿ

ತಿಳಿದವರು ಹೇಳುವಿರಾ?

'ಜೋಂಗಿ' ಯಾರು? ಗಂಡಸೋ ಹೆಂಗಸೋ? ಎಂಬ ಪ್ರಶ್ನೆಯು ಅಲ್ಲಲ್ಲಿ ಕೇಳಲ್ಪಡುತ್ತಿದೆ! ಗೊತ್ತಾಗಿದ್ದರೆ ಅವನನ್(ಳ)ನೂ ಕೆಲವು ಮುರಿಯುತ್ತಿದ್ದೆವು ಎಂದು 'ಡೋಂಗಿ' ಕಲಂನಲ್ಲಿ ಜಾಗ ಪಡೆದ ಲವರು ಹೇಳಿಕೆ. ಇದನ್ನೆಲ್ಲಾ 'ಡೋಂಗಿ'ಯೇ ಕವಿಯೂರೆ ಕೇಳಿದ್ದಾನೆ(ಳೆ). 'ಕಂಡದ್ದು ಹೇಳಿದರೆ ಕೆಂಡವಂಥಾ ಕೋಪವೇ?

"ಬೇರೆಯವರನ್ನು ತೀಕಿಸಬೇಡ. ಎಲ್ಲಗು ವರ್ತಿಸುವದು ತಮ್ಮತಮ್ಮ ದ್ವಾರಿಯಲ್ಲಿ ಸರಿಯಾಗಿ. ತಪ್ಪುಗಳನ್ನು ತಿದ್ದಲು ನೀನು ಇದನ್ನು ಬರೆಯುತಪೆಂಬುದು ಎಲ್ಲರಿಗೂ ಗೊತ್ತು. ಆದರೆ ಜಗತ್ತಿನ ಯಾವ ವ್ಯಕ್ತಿಯೂ ಕೂಡ ಈ ಅತ್ಯಾಶ್ಚರ್ಯಕಾರಿಕ ಜಗತ್ತಿನ ಆಗು ಹೋಗುಗಳನ್ನು ತಪೆಯಲಾರ." ಎಂದು 'ಡೋಂಗಿ'ಯು 'ಭಾಯಿ'ಯೊಬ್ಬರು ಬರೆದಿದ್ದಾರೆ. 'ಡೋಂಗಿ'ಯು ಇಷ್ಟು ನಿರಾಶಾವಾದಿಯಲ್ಲ. ಈ ಜಗತ್ತಿನ ಆಗು ಹೋಗುಗಳಲ್ಲಿ, ಮನುಷ್ಯನ ಸ್ವಭಾವ ಗುಣಗಳಲ್ಲಿ ಮನುಷ್ಯನಿಂದ ಯಾವ ಬದಲಾವಣೆಯೂ ಆಗಲಾರದು ಎನ್ನುವದಾದರೆ ನಮ್ಮ ಶಾಲಾ, ಕಾಲೇಜುಗಳನ್ನು, ನಮ್ಮ ಸಂಘ ಸಂಸ್ಥೆಗಳನ್ನು, ಮುಚ್ಚ್ಹೋಣವೇ? ಈ ನಿರಾಶಾಭಾವನೆಯೇ ಭಾರತದ ಅದೋಗತಿಗೆ ಕಾರಣವಲ್ಲವೇ?

* * *

ಅನೇಕ ಗ್ರಾಮಸ್ಥರು ಗ್ರಾಮದಲ್ಲಿ ... ಸೇರಿದಾಗ

"ಕ್ವಿಟ್ ಇಂಡಿಯಾ" ಯಾರಿಗೆ? ಯಾವದಕ್ಕೆ?

* * *

ಪಂಡಿಕೇರಿಯಲ್ಲಿ ಮಂತೆಪ್ಪಬ್ಬ ಹಿಂದು ಪನ್ನು ಕ್ರಿಶ್ಚಿಯನ್ ಜಾತಿಗೆ ಸೇರಿಸುವ ಪ್ರಯತ್ನಗಳಾಗುತ್ತಿವೆಯಂತೆ. ಕ್ರಿಸ್ತಾನಳೊಬ್ಬಳನ್ನು ಅತನು ಮದುವೆಯಾಗಿರುವನಂ. ಮಂತೆಗೌಡ್ತಿಯರು, ಕ್ರಿಶ್ಚಿಯನರು ಈ ರೀತಿ ಹಿಂದುಗಳನ್ನು ತಮ್ಮ ಮತಕ್ಕೆ ಸೇರಿಸುತ್ತಿರುವಾಗ ಹಿಂದೂ ಧರ್ಮಕ್ಕೆ ಧಕ್ಕೆಯಿಲ್ಲವೇ?

* * *

ಕೊಡಗರು ಇತರರನ್ನು ಕಣ್ಮಚ್ಚಿ ಅನುಸರಿಸುವ ಕಲೆಯಲ್ಲಿ ಸಿದ್ಧಹಸ್ತರಂತೆ. ಇಲ್ಲದಿದ್ದರೆ ಈ ಉರಿ ಬೆಸಿಗೆಯಲ್ಲೂ 'ಫುಲ್' ಸೂಟ್ 'ನೆಕ್ ಟೈ'ಗಳ ಅವಶ್ಯಕತೆ ಏಲ್ಲಿ?

ಇಂದು ದೊಡ್ಡ ವಿದ್ಯಾಸಂಪನ್ನರೆನ್ನಿಸಿಕೊಂಡವರು ತಮ್ಮ ಮಾತೃ ಭಾಷೆಯನ್ನೇ ಮರೆತಿರುವರು. ತಮ್ಮ ಮನೆಗಳಲ್ಲಿ ಇಂಗ್ಲಿಷ್ ತಿಳಿಯದ ಆಳುಗಳ ಸಂಗಡವೂ ಇಂಗ್ಲಿಷ್ ಮಾತಾಡಬೇಕೆ?

ಲೋಕ ಸಂಚಾರಿ ನಾರದರು ಎಲ್ಲಾದರೂ ಅಕಸ್ಮಿತವಾಗಿ ಅಗಸ್ತ್ಯನ ತಪದ ಪ್ರಸ್ತಾಪವೆಂದು, ಕೊಡಗಿಗೆ ಒಂದರೆ ಏನಪ್ಪ ಪ್ರಾಯ ಪಟ್ಟಾರು?

— 'ಡೋಂಗಿ'